Azadi Ka Amrit Mahotsav

INTERNATIONAL YEAR OF MILLETS 2023

# ಹಾಸನ ವಿಶ್ವವಿದ್ಯಾಲಯ

ಹೇಮಗಂಗೋತ್ರಿ ಹಾಸನ

HASSAN UNIVERSITY

HEMAGANGOTHRI HASSAN – 573226

G20 भारत 2023 INDIA

ಕುಲಸಚಿವರ ಕಾರ್ಯಾಲಯ

Office of the Registrar

Email:reg.hassan.uni@gmail.com

ನಂ./ಹೆಚ್.ಯು.ಹೆಚ್/341/2023-24

ದಿನಾಂಕ :25.09.2023

## ಅಧಿಸೂಚನೆ

**ವಿಷಯ** :2023 –24 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ಅರ್ಜಿ ಸಲ್ಲಿಸಲು ಮುಂದೂಡಿರುವ ಬಗ್ಗೆ.

**ಉಲ್ಲೇಖ** : ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 22.09.2023

********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಹಾಸನ ವಿಶ್ವವಿದ್ಯಾಲಯವು ಹೇಮಗಂಗೋತ್ರಿ ಆವರಣ ಮತ್ತು ಹಾಸನ ವಿಶ್ವವಿದ್ಯಾಲಯದಲ್ಲಿ ಸಂಯೋಜನೆಗೊಳಗೊಂಡ ಸರ್ಕಾರಿ ಕಾಲೇಜು ಮತ್ತು ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳಲ್ಲಿ 2023–24ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಎಂ.ಎ/ಎಂ.ಕಾಂ/ಎಂ.ಎಸ್.ಡಬ್ಲ್ಯೂ/ಎಂ.ಎಸ್ಸಿ/ಪಿ.ಜಿ.ಡಿಪ್ಲೋಮಾ ಅರ್ಜಿಗಳನ್ನು ಆಹ್ವಾನಿಸಿ ಪ್ರವೇಶಾತಿಯನ್ನು ಕೈಗೊಳ್ಳಲು ಅಧಿಸೂಚನೆ ಹೊರಡಿಸಲಾಗಿದೆ.

| | | |
|---|---|---|
| 01. | ಪ್ರವೇಶಾತಿ ಅರ್ಜಿ ಸಲ್ಲಿಸಲು ಆರಂಭಿಕ ದಿನಾಂಕ | 05.09.2023 |
| 02. | ಪ್ರವೇಶಾತಿ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ | 30.09.2023 |

ಮೇಲಿನ ಪ್ರವೇಶಾತಿ ವಿವರಗಳನ್ನು ಹಾಗೂ ದಿನಾಂಕಗಳನ್ನು ಸರ್ಕಾರಿ ಕಾಲೇಜು ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ವೆಬ್‌ಸೈಟ್ ಮತ್ತು ಸೂಚನಾ ಫಲಕದಲ್ಲಿ ಪ್ರಕಟಿಸುವುದರ ಜೊತೆಗೆ ಘಟಕ ಹಾಗೂ ಪದವಿ ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳು ಹಾಗೂ ಪೋಷಕರ ಗಮನಕ್ಕೆ ತರಲು ಸೂಚಿಸಲಾಗಿದೆ.

**ಪ್ರಾಂಶುಪಾಲರುಗಳಿಗೆ/ವಿದ್ಯಾರ್ಥಿಗಳಿಗೆ ಸೂಚನೆಗಳು:**

1. ಕಾಲೇಜುಗಳಲ್ಲಿನ ಎಲ್ಲಾ ಸ್ನಾತಕೋತ್ತರ ತರಗತಿಗಳ ವಿದ್ಯಾರ್ಥಿಗಳ ಪ್ರವೇಶ ಮಿತಿ (Intake) ಸಂಖ್ಯೆಯು ವಿಶ್ವವಿದ್ಯಾಲಯ ಅನುಮೋದನೆ ಮಾಡಿದ ಸಂಖ್ಯೆಯನ್ನು ಮೀರಬಾರದು.
2. UGC ಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಿಂದ ಸ್ನಾತಕ ಪದವಿ ಪಡೆದ ವಿದ್ಯಾರ್ಥಿಗಳು ಮಾತ್ರ ಪ್ರವೇಶಾತಿಗೆ ಅರ್ಹರಾಗಿರುತ್ತಾರೆ.
3. ಪ್ರವೇಶಾತಿ ಅರ್ಜಿಗಳನ್ನು ಮತ್ತು ಮಾಹಿತಿ ವಿವರಗಳನ್ನು ಹಾಸನ ವಿಶ್ವವಿದ್ಯಾಲಯದ ಜಾಲತಾಣ **(Email:reg.hassan.uni@gmail.com)** ದಿಂದ ಪಡೆದುಕೊಳ್ಳಬಹುದಾಗಿದೆ.
4. ಹಾಸನ ವಿಶ್ವವಿದ್ಯಾಲಯದ ಹೇಮಗಂಗೋತ್ರಿಯಲ್ಲಿರುವ ಸ್ನಾತಕೋತ್ತರ ವಿಭಾಗಗಳಿಗೆ (ಕೋರ್ಸುಗಳಿಗೆ) ನಿಯಮಾನುಸಾರ ಕಡಿಮೆ ಪ್ರವೇಶಾತಿ ಅರ್ಜಿಗಳು ಬಂದಲ್ಲಿ ಅಂತಹ ವಿಭಾಗಗಳ ವಿದ್ಯಾರ್ಥಿಗಳನ್ನು ಹತ್ತಿರದ ಸಂಯೋಜಿತಾ ಕಾಲೇಜುಗಳಿಗೆ ವರ್ಗಾಯಿಸಲಾಗುವುದು.

**ವಿಶೇಷ ಸೂಚನೆ:**

1. ಹೆಚ್ಚಿನ ವಿವರಗಳಿಗಾಗಿ ವಿಶ್ವವಿದ್ಯಾಲಯದ ವಿವರಣಾ ಪುಸ್ತಕ ಓದಿಕೊಳ್ಳುವುದು.
2. ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದಿಂದ ವಿದ್ಯಾರ್ಥಿವೇತನ ಮಂಜೂರಾತಿಗೆ ಅರ್ಹವಿರುವ ಕಾಲೇಜುಗಳು ವಿದ್ಯಾರ್ಥಿಗಳ ತಂದೆ/ತಾಯಿ/ಪೋಷಕರ ವಾರ್ಷಿಕ ವರಮಾನಕ್ಕೆ ಅನುಗುಣವಾಗಿ (ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಅಧಿಸೂಚನೆಗಳ ಅನುಸಾರ) SC/ST,OBC ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಬೇಕು, ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿದ್ಯಾರ್ಥಿವೇತನಕ್ಕೆ ನಿಗದಿತ ಸಮಯದಲ್ಲಿ ಸಂಬಂಧಿಸಿದ ಇಲಾಖೆಗೆ ಅರ್ಜಿ ಸಲ್ಲಿಸಬೇಕು ಮತ್ತು ಪ್ರಾಂಶುಪಾಲರು ಸಹ ಅರ್ಜಿ ಸಲ್ಲಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ವಿದ್ಯಾರ್ಥಿವೇತನ ಮಂಜೂರಾಗದಂತಹ ಅಥವಾ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸದ ವಿದ್ಯಾರ್ಥಿಗಳಿಂದ ಪೂರ್ಣ ಪ್ರಮಾಣದ ಶುಲ್ಕವನ್ನು ಪಾವತಿಸಿಕೊಳ್ಳಬೇಕು.
3. ಹೆಚ್ಚಿನ ಮಾಹಿತಿಯನ್ನು ಹಾಸನ ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ huh.karnataka.gov.in ಪಡೆಯಬಹುದು.

25/9/2023

ಕುಲಸಚಿವರು

ಕುಲಸಚಿವರು
ಹಾಸನ ವಿಶ್ವವಿದ್ಯಾಲಯ
ಹೇಮಗಂಗೋತ್ರಿ
ಹಾಸನ-573 226

**ಪ್ರತಿ:** 1.ಕುಲಸಚಿವರು (ಮೌಲ್ಯಮಾಪನ) ಹಾಸನ ವಿಶ್ವವಿದ್ಯಾಲಯ, ಹಾಸನ

2.ಹಣಕಾಸು ಅಧಿಕಾರಿಗಳ ಕಛೇರಿ, ಹಾಸನ ವಿಶ್ವವಿದ್ಯಾಲಯ, ಹಾಸನ

3.ಸಮಾಜ ಕಲ್ಯಾಣಾಧಿಕಾರಿಗಳು, ಹಾಸನ ವಿಶ್ವವಿದ್ಯಾಲಯ, ಹಾಸನ

4.ಜಿಲ್ಲಾಧಿಕಾರಿಗಳು. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಛೇರಿ, ಹಾಸನ ವಿಶ್ವವಿದ್ಯಾಲಯ, ಹಾಸನ

5.ಮಾನ್ಯ ಕುಲಪತಿಯವರ ಆಪ್ತಕಾರ್ಯದರ್ಶಿಗಳು ಹಾಗೂ ಆಪ್ತ ಸಹಾಯಕರು ಹಾಸನ ವಿಶ್ವವಿದ್ಯಾಲಯ, ಹಾಸನ

6.ಕಛೇರಿ ಪ್ರತಿ